# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1183 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ |
| ಉತ್ತರಿಸುವವರು | : | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 20.12.2018 |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಪೌಷ್ಠಿಕತೆಯ ಪ್ರಮಾಣ ಅತಿ ಹೆಚ್ಚಿದ್ದು, ಅದರಲ್ಲೂ ವಿಶೇಷವಾಗಿ ಮಕ್ಕಳಲ್ಲಿ ಮತ್ತು ಮಹಿಳೆಯರಲ್ಲಿ ರಕ್ತಹೀನತೆಯ ಪ್ರಮಾಣ ಕರ್ನಾಟಕದಲ್ಲೇ ಹೆಚ್ಚು ಇರುವುದರಿಂದ ಮಕ್ಕಳು ಮರಣ ಹೊಂದಿದ್ದು, ಆರೋಗ್ಯ ಮತ್ತು ಪೌಷ್ಠಿಕತಾ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದ್ದು ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗಿದೆಯೇ (ವರದಿ ಪ್ರತಿಯನ್ನು ನೀಡುವುದು). | ರಾಜ್ಯದಲ್ಲಿ ಪೌಷ್ಠಿಕತೆಯ ಪ್ರಮಾಣವನ್ನು ಹೆಚ್ಚಿಸಲು ಪ್ರತಿ ಅಂಗನವಾಡಿ ಕೇಂದ್ರದಲ್ಲೂ ಪ್ರತಿ ತಿಂಗಳು ತಾಯಂದಿರ ಸಭೆ ಹಾಗೂ ಪೌಷ್ಠಿಕತಾ ಶಿಬಿರಗಳನ್ನು ನಡೆಸಲಾಗುತ್ತಿದೆ.<br><br>ಪ್ರತಿ ತಿಂಗಳು 3ನೇ ಶನಿವಾರ ಅಂಗನವಾಡಿ ಕೇಂದ್ರಗಳಲ್ಲಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ದಿನ ಆಚರಿಸಲಾಗುತ್ತಿದೆ. |
| ಆ) | ಪ್ರಸ್ತುತ ರಾಜ್ಯದಲ್ಲಿ 0-6 ವರ್ಷದೊಳಗಿನ ಮಕ್ಕಳ ಅಪೌಷ್ಠಿಕತೆ ಪ್ರಮಾಣ ಎಷ್ಟಿದೆ; | ಪ್ರಸ್ತುತ ರಾಜ್ಯದಲ್ಲಿ 0-6 ವರ್ಷದೊಳಗಿನ ಸಾಧಾರಣ ಅಪೌಷ್ಠಿಕ ಮಕ್ಕಳ ಪ್ರಮಾಣ: ಶೇಕಡ 16.69 ಮತ್ತು ತೀವ್ರ ಅಪೌಷ್ಠಿಕ ಮಕ್ಕಳ ಪ್ರಮಾಣ ಶೇಕಡ 0.36 ಇರುತ್ತದೆ. |
| ಇ) | ಪ್ರಸ್ತುತ ರಾಜ್ಯದಲ್ಲಿ ಮಹಿಳೆಯರ ಅಪೌಷ್ಠಿಕತಾ ಪ್ರಮಾಣ ಎಷ್ಟಿದೆ; | ರಾಜ್ಯದಲ್ಲಿ ಗರ್ಭಿಣಿ ಮಹಿಳೆಯರಲ್ಲಿ ಶೇ.45ರಷ್ಟು ರಕ್ತ ಹೀನತೆ ಇರುವುದಾಗಿ ಎನ್.ಎಫ್.ಹೆಚ್.ಎಸ್-4ರ ಸಮೀಕ್ಷೆಯಿಂದ ಕಂಡುಬಂದಿದೆ. |
| ಈ) | ಅಪೌಷ್ಠಿಕತೆಯಿಂದಾಗಿ ವೇಸ್ಟಿಂಗ್ ಮತ್ತು ಸ್ಟಂಟಿಂಗ್ (ಬೆಳವಣಿಗೆಯಲ್ಲಿ ಕುಂಠಿತ) ಮಕ್ಕಳ ಪ್ರಮಾಣ ಜಿಲ್ಲಾವಾರು ಎಷ್ಟಿದೆ; ಮತ್ತು ಅದನ್ನು ತಡೆಯಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು). | 1. ಅಪೌಷ್ಠಿಕತೆಯಿಂದಾಗಿ ವೇಸ್ಟಿಂಗ್ ಮಕ್ಕಳ ಪ್ರಮಾಣ: ಶೇಕಡ 4.82 ಮತ್ತು ಸ್ಟಂಟಿಂಗ್ (ಬೆಳವಣಿಗೆಯಲ್ಲಿ ಕುಂಠಿತ) ಮಕ್ಕಳ ಪ್ರಮಾಣ: ಶೇಕಡ 8.28 ಇರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಲಾಗಿದೆ<br><br>2. ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿಮಾಹೆ ಎಲ್ಲಾ ಮಕ್ಕಳ ತೂಕ ಮತ್ತು ಎತ್ತರವನ್ನು ಅಳತೆಮಾಡಲಾಗುತ್ತಿದ್ದು, ಬೆಳವಣಿಗೆಯ ಚಾರ್ಟ್‌ಗಳಲ್ಲಿ ಬೆಳವಣಿಗೆಯ ಮಟ್ಟವನ್ನು ಗುರುತಿಸಲಾಗುತ್ತಿದೆ.<br><br>3. ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿ ಮಾಹೆ ಸ್ಟಂಟಿಂಗ್ ಮತ್ತು ವೇಸ್ಟಿಂಗ್ ಆಗಿರುವ (ಸಾಮಾನ್ಯ ಅಪೌಷ್ಠಿಕ ಮತ್ತು ತೀವ್ರ ಅಪೌಷ್ಠಿಕ) ಮಕ್ಕಳ ಅಪೌಷ್ಠಿಕತೆಯನ್ನು ತಡೆಯಲು ಕೆಳಕಂಡಂತೆ ಕ್ರಮ ವಹಿಸಲಾಗಿದೆ.<br>• ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸಾಮಾನ್ಯ ಮಕ್ಕಳಿಗೆ ಪ್ರತಿ ದಿನ ರೂ. 8.00 /-ರಂತೆ ಘಟಕ ವೆಚ್ಚ ಭರಿಸುತ್ತಿದ್ದು, ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ರೂ. 12.00 /-ರ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.<br>• 3 ರಿಂದ 6 ವರ್ಷದ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ಹಾಗೂ 5 ದಿನ ಹಾಲು ನೀಡಲಾಗುವುದು. |

| | | |
|---|---|---|
| | | • 6 ತಿಂಗಳಿಂದ-3 ವರ್ಷದ ತೀವ್ರ ಅಪೌಷ್ಟಿಕ ಮ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ರಾಯಚೂರಿನ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಕೆನೆಭರಿತ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.<br>• 3 ರಿಂದ 6 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ರಾಯಚೂರಿನ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 5 ದಿನ 200 ಎಂ.ಎಲ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.<br>• ತೀವ್ರ ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಔಷಧಿ ಹಾಗೂ ಚಿಕಿತ್ಸಾ ಆಹಾರಕ್ಕಾಗಿ (Therapeutic food) ಪ್ರತಿ ಮಗುವಿಗೆ ವಾರ್ಷಿಕ ರೂ.2000/-ಗಳಂತೆ ವೆಚ್ಚ ಭರಿಸಲಾಗುತ್ತಿದೆ.<br>ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪೌಷ್ಟಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಅಪೌಷ್ಟಿಕ ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. |
| ಉ) | ರಾಜ್ಯದ ಮಕ್ಕಳು ಮತ್ತು ಮಹಿಳೆಯರಲ್ಲಿ ಪೌಷ್ಟಿಕತಾ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು). | ಮಕ್ಕಳು ಮತ್ತು ಮಹಿಳೆಯರಲ್ಲಿ ಪೌಷ್ಟಿಕತಾ ಪ್ರಮಾಣವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ. |

ಸಂ:ಮಮಇ 358 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1183 ಕ್ಕೆ ಅನುಬಂಧ -1

ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರದ ಮಕ್ಕಳ ಉದ್ದ/ಎತ್ತರ/ ತೂಕ ಮಾಡಿದ / ವೇಸ್ಟಿಂಗ್ ಮಾಡಿದ ಮಕ್ಕಳ ಸಂಖ್ಯೆಯ ವಿವರ (ನವೆಂಬರ್ 2018 ರ ಅಂತ್ಯಕ್ಕೆ)

6ತಿಂಗಳಿಂದ- 6ವರ್ಷದ ಮಕ್ಕಳು

| ಕ್ರ ಸಂ | ಜಿಲ್ಲೆಯ ಹೆಸರು | ಅಂಗನವಾಡಿ ದಾಖಲಾದ ಮಕ್ಕಳ ಸಂಖ್ಯೆ | ನವೆಂಬರ್ 2018 ತಿಂಗಳಲ್ಲಿ ಹಾಜರಾದ ಮಕ್ಕಳ ಸಂಖ್ಯೆ | ಉದ್ದ /ಎತ್ತರ / ತೂಕ ಮಾಡಿದ ಮಕ್ಕಳ ಸಂಖ್ಯೆವನ್ನು ಅಳೆದ ಮಕ್ಕಳ ಸಂಖ್ಯೆ | ಗುರುತಿಸಲಾದ ಎತ್ತರಕ್ಕೆ ತಕ್ಕಂತೆ ತೂಕ ಹೊಂದಿರದ (Wasting) | |
|---|---|---|---|---|---|---|
| | | | | | ಮಕ್ಕಳ ಸಂಖ್ಯೆ | ಶೇಕಡವಾರು |
| 1 | ರಾಯಚೂರು | 206250 | 191411 | 190561 | 67363 | 35.35 |
| 2 | ಯಾದಗಿರಿ | 120769 | 119213 | 119070 | 18323 | 15.39 |
| 3 | ಕಲಬುರಗಿ | 196683 | 184368 | 184368 | 15947 | 8.65 |
| 4 | ಬೀದರ್ | 138311 | 125459 | 115002 | 9871 | 8.58 |
| 5 | ತುಮಕೂರು | 144111 | 136301 | 131652 | 10151 | 7.71 |
| 6 | ಬಳ್ಳಾರಿ | 221534 | 198674 | 198674 | 14762 | 7.43 |
| 7 | ಬಾಗಲಕೋಟೆ | 183719 | 171835 | 171835 | 9671 | 5.63 |
| 8 | ಹಾವೇರಿ | 134445 | 146347 | 146347 | 7238 | 4.95 |
| 9 | ಚಾಮರಾಜನಗರ | 67161 | 58513 | 56848 | 2072 | 3.64 |
| 10 | ಕೊಪ್ಪಳ | 170703 | 144940 | 131307 | 4426 | 3.37 |
| 11 | ಕೋಲಾರ | 100006 | 82208 | 82173 | 2427 | 2.95 |
| 12 | ಹಾಸನ | 80214 | 74370 | 73009 | 1390 | 1.90 |
| 13 | ವಿಜಯಪುರ | 193002 | 178344 | 178344 | 2557 | 1.43 |
| 14 | ಧಾರವಾಡ | 115239 | 111961 | 111961 | 1417 | 1.27 |
| 15 | ಚಿಕ್ಕಬಳ್ಳಾಪುರ | 86043 | 76768 | 73894 | 686 | 0.93 |
| 16 | ಮಂಡ್ಯ | 95424 | 83171 | 83171 | 437 | 0.53 |
| 17 | ಬೆಳಗಾವಿ | 426335 | 406844 | 406844 | 1737 | 0.43 |
| 18 | ಗದಗ | 89224 | 84672 | 84672 | 345 | 0.41 |
| 19 | ದಕ್ಷಿಣ ಕನ್ನಡ | 103797 | 97898 | 96082 | 342 | 0.36 |
| 20 | ಉಡುಪಿ | 51556 | 49850 | 49850 | 168 | 0.34 |
| 21 | ಉತ್ತರ ಕನ್ನಡ | 88490 | 86272 | 84522 | 273 | 0.32 |
| 22 | ರಾಮನಗರ | 46884 | 44642 | 44284 | 132 | 0.30 |
| 23 | ಶಿವಮೊಗ್ಗ | 100389 | 98770 | 98770 | 258 | 0.26 |
| 24 | ಬೆಂಗಳೂರು ನಗರ | 180190 | 166574 | 165162 | 424 | 0.26 |
| 25 | ಚಿಕ್ಕಮಗಳೂರು | 57053 | 52511 | 48145 | 98 | 0.20 |
| 26 | ಚಿತ್ರದುರ್ಗ | 121615 | 117993 | 115748 | 178 | 0.15 |
| 27 | ಕೊಡಗು | 30421 | 25249 | 31449 | 34 | 0.11 |
| 28 | ದಾವಣಗೆರೆ | 143850 | 139224 | 141193 | 150 | 0.11 |
| 29 | ಬೆಂಗಳೂರು ಗ್ರಾ | 58982 | 52215 | 52215 | 55 | 0.11 |
| 30 | ಮೈಸೂರು | 147256 | 126241 | 126241 | 130 | 0.10 |
| | **ಒಟ್ಟು** | **3899656** | **3632838** | **3593393** | **173062** | **4.82** |

| ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1183 ಕ್ಕೆ ಅನುಬಂಧ -2 | | | | | | |
|---|---|---|---|---|---|---|
| ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರದ ಮಕ್ಕಳ ಉದ್ದ/ಎತ್ತರ/ ತೂಕ ಮಾಡಿದ /ಸ್ಟಂಟಿಂಗ್/ ಮಾಡಿದ ಮಕ್ಕಳ ಸಂಖ್ಯೆಯ ವಿವರ ನವೆಂಬರ್ 2018 ರ ಅಂತ್ಯಕ್ಕೆ | | | | | | |
| 6ತಿಂಗಳಿಂದ- 6ವರ್ಷದ ಮಕ್ಕಳು | | | | | | |
| ಕ್ರ ಸಂ | ಜಿಲ್ಲೆಯ ಹೆಸರು | ಅಂಗನವಾಡಿ ದಾಖಲಾದ ಮಕ್ಕಳ ಸಂಖ್ಯೆ | ನವೆಂಬರ್ 2018 ತಿಂಗಳಲ್ಲಿಹಾಜರಾದ ಮಕ್ಕಳ ಸಂಖ್ಯೆ | ಉದ್ದ /ಎತ್ತರ / ತೂಕ ಮಾಡಿದ ಮಕ್ಕಳ ಸಂಖ್ಯೆವನ್ನು ಅಳೆದ ಮಕ್ಕಳ ಸಂಖ್ಯೆ | ಗುರುತಿಸಲಾದ ಕುಂಠಿತ ಬೆಳವಣಿಗೆಯ (Stunting) | |
| | | | | | ಮಕ್ಕಳ ಸಂಖ್ಯೆ | ಶೇಕಡವಾರು |
| 1 | ರಾಯಚೂರು | 206250 | 191411 | 190561 | 66696 | 35.00 |
| 2 | ಯಾದಗಿರಿ | 120769 | 119213 | 119070 | 41102 | 34.52 |
| 3 | ಬಾಗಲಕೋಟೆ | 183719 | 171835 | 171835 | 39559 | 23.02 |
| 4 | ಚಾಮರಾಜನಗರ | 67161 | 58513 | 56848 | 11290 | 19.86 |
| 5 | ಬಳ್ಳಾರಿ | 221534 | 198674 | 198674 | 26165 | 13.17 |
| 6 | ಕೋಲಾರ | 100006 | 82208 | 82173 | 10273 | 12.50 |
| 7 | ಬೀದರ್ | 138311 | 125459 | 115002 | 12730 | 11.07 |
| 8 | ಕಲಬುರಗಿ | 196683 | 184368 | 184368 | 18853 | 10.23 |
| 9 | ತುಮಕೂರು | 144111 | 136301 | 131652 | 12666 | 9.62 |
| 10 | ಕೊಪ್ಪಳ | 170703 | 144940 | 131307 | 12608 | 9.60 |
| 11 | ಧಾರವಾಡ | 115239 | 111961 | 111961 | 9792 | 8.75 |
| 12 | ಹಾವೇರಿ | 134445 | 146347 | 146347 | 11167 | 7.63 |
| 13 | ಬೆಂಗಳೂರು ಗ್ರಾ | 58982 | 52215 | 52215 | 2720 | 5.21 |
| 14 | ರಾಮನಗರ | 46884 | 44642 | 44284 | 1771 | 4.00 |
| 15 | ಹಾಸನ | 80214 | 74370 | 73009 | 1979 | 2.71 |
| 16 | ಚಿಕ್ಕಬಳ್ಳಾಪುರ | 86043 | 76768 | 73894 | 1894 | 2.56 |
| 17 | ವಿಜಯಪುರ | 193002 | 178344 | 178344 | 4277 | 2.40 |
| 18 | ಬೆಳಗಾವಿ | 426335 | 406844 | 406844 | 7298 | 1.79 |
| 19 | ಮಂಡ್ಯ | 95424 | 83171 | 83171 | 675 | 0.81 |
| 20 | ಗದಗ | 89224 | 84672 | 84672 | 586 | 0.69 |
| 21 | ಬೆಂಗಳೂರು ನಗರ | 180190 | 166574 | 165162 | 995 | 0.60 |
| 22 | ದಕ್ಷಿಣ ಕನ್ನಡ | 103797 | 97898 | 96082 | 547 | 0.57 |
| 23 | ಉಡುಪಿ | 51556 | 49850 | 49850 | 251 | 0.50 |
| 24 | ಉತ್ತರ ಕನ್ನಡ | 88490 | 86272 | 84522 | 371 | 0.44 |
| 25 | ಶಿವಮೊಗ್ಗ | 100389 | 98770 | 98770 | 413 | 0.42 |
| 26 | ಚಿತ್ರದುರ್ಗ | 121615 | 117993 | 115748 | 346 | 0.30 |
| 27 | ದಾವಣಗೆರೆ | 143850 | 139224 | 141193 | 378 | 0.27 |
| 28 | ಚಿಕ್ಕಮಗಳೂರು | 57053 | 52511 | 48145 | 126 | 0.26 |
| 29 | ಮೈಸೂರು | 147256 | 126241 | 126241 | 163 | 0.13 |
| 30 | ಕೊಡಗು | 30421 | 25249 | 31449 | 14 | 0.04 |
| | ಒಟ್ಟು | **3899656** | **3632838** | **3593393** | **297705** | **8.28** |

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1183ಕ್ಕೆ ಅನುಬಂಧ–3

**ಸರ್ಕಾರವು ರಾಜ್ಯದ ಮಕ್ಕಳು ಮತ್ತು ಮಹಿಳೆಯರಲ್ಲಿ ಪೌಷ್ಠಿಕತಾ ಪ್ರಮಾಣವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳ ವಿವರ;**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಸಾರ್ವತ್ರಿಕ ಯೋಜನೆಯಾಗಿದ್ದು, 1975ನೇ ಇಸವಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಗರ್ಭಿಣಿ, ಬಾಣಂತಿಯರು ಮತ್ತು 06 ವರ್ಷದೊಳಗಿನ ಮಕ್ಕಳು ಸ್ವಯಂ ಆಯ್ಕೆ ಮಾಡಿಕೊಂಡು ಪ್ರಯೋಜನ ಪಡೆಯುತ್ತಿದ್ದಾರೆ. ತಲೆಮಾರುಗಳಿಂದ ಬಂದಿರುವ ಅಪೌಷ್ಠಿಕತೆಯ ವಿಷವರ್ತುಲವನ್ನು ತಡೆಯುವ ಉದ್ದೇಶದಿಂದ ಹಾಗೂ ರಾಜ್ಯದಲ್ಲಿನ ಮಕ್ಕಳ ಕುಂಠಿತ ಬೆಳವಣಿಗೆ, ಎತ್ತರಕ್ಕೆ ತಕ್ಕಂತೆ ತೂಕ ಇಲ್ಲದೇ ಇರುವುದನ್ನು ಕಡಿಮೆಗೊಳಿಸುವ ಉದ್ದೇಶದಿಂದ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

### 1. ಮಕ್ಕಳಿಗಾಗಿ:

- ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 6 ವರ್ಷದೊಳಗಿನ ಸಾಮಾನ್ಯ ಮಕ್ಕಳಿಗೆ ಪ್ರತಿ ದಿನ ರೂ. 8.00 /–ರಂತೆ ಹಾಗೂ ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ರೂ. 12.00 /–ರ ಘಟಕ ವೆಚ್ಚದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- 3 ರಿಂದ 6 ವರ್ಷದ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ಹಾಗೂ 5 ದಿನ ಕೆನೆಭರಿತ ಹಾಲು ನೀಡಲಾಗುತ್ತಿದೆ.
- 6 ತಿಂ–3 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ರಾಯಚೂರಿನ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್. ಕೆನೆಭರಿತ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.
- 3 ರಿಂದ 6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ರಾಯಚೂರಿನ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 5 ದಿನ 200 ಎಂ.ಎಲ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.
- ತೀವ್ರ ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಔಷಧಿ ಹಾಗೂ ಚಿಕಿತ್ಸಾ ಆಹಾರಕ್ಕಾಗಿ (Therapeutic food) ಪ್ರತಿ ಮಗುವಿಗೆ ವಾರ್ಷಿಕ ರೂ.2000/–ಗಳಂತೆ ವೆಚ್ಚ ಭರಿಸಲಾಗುತ್ತಿದೆ.
- ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪೌಷ್ಠಿಕ ಪುನರ್ವಸತಿ ಕೇಂದ್ರ(NRC) ಗಳಲ್ಲಿ ಅಪೌಷ್ಠಿಕ ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

### 2. ಮಹಿಳೆಯರಿಗಾಗಿ;

- ಈ ಹಿಂದೆ ಗರ್ಭಿಣಿ ಮತ್ತು ಬಾಣಂತಿಯರಿಗೆ ಆಹಾರ ಪದಾರ್ಥಗಳನ್ನು THR (Take Home Ration) ರೂಪದಲ್ಲಿ ನೀಡಲಾಗುತ್ತಿದ್ದು, ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡುವ ಮಾತೃಪೂರ್ಣ ಯೋಜನೆಯನ್ನು 2ನೇ ಅಕ್ಟೋಬರ್ 2017 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ.
- ಗರ್ಭಿಣಿ / ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿ ಹೆಚ್ಚು ಪೌಷ್ಠಿಕತೆ ಅಂಶಗಳನ್ನು ಒಳಗೊಂಡ ಮಧ್ಯಾಹ್ನದ ಪೌಷ್ಠಿಕ ಊಟವನ್ನು ಒದಗಿಸುವ ಮೂಲಕ ಅವರ ಪೌಷ್ಠಿಕಾಂಶದ ಪ್ರಮಾಣವನ್ನು ಹೆಚ್ಚಿಸಿ, ಕಡಿಮೆ ತೂಕದ ಮಕ್ಕಳ ಜನನ ಹಾಗೂ ಮಕ್ಕಳಲ್ಲಿನ ಅಪೌಷ್ಠಿಕತೆ ಪ್ರಮಾಣ ಕಡಿಮೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಈ ಸಂಪೂರ್ಣ ಊಟದಲ್ಲಿ ಅನ್ನ, ಸಾಂಬಾರ್, ಪಲ್ಯದ ಜೊತೆಗೆ ಬೇಯಿಸಿದ ಮೊಟ್ಟೆ, ಹಾಲು ಮತ್ತು ಶೇಂಗಾ ಚಿಕ್ಕಿಯನ್ನು ತಿಂಗಳಿಗೆ ಕನಿಷ್ಠ 25 ದಿನಗಳು ನೀಡಲಾಗುತ್ತಿದೆ. ಇದರಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಪ್ರತಿದಿನಕ್ಕೆ ಬೇಕಾಗುವ ಪ್ರೋಟೀನ್ ಮತ್ತು ಕ್ಯಾಲ್ಸಿಯಂ ಕ್ಯಾಲೋರಿ ಅಂಶಗಳಲ್ಲಿ, ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.21/-ರ ಘಟಕ ವೆಚ್ಚದಡಿ ಶೇ.40-45 (Required Daily Allowance - 41 ಗ್ರಾಂ ಪ್ರೋಟೀನ್, 578 mg ಕ್ಯಾಲ್ಸಿಯಂ) ಗಳಷ್ಟು ಒದಗಿಸಿದಂತಾಗುತ್ತದೆ.
- ಮಾತೃಪೂರ್ಣ ಯೋಜನೆಯಡಿಯಲ್ಲಿ ಗರ್ಭಿಣಿ/ಬಾಣಂತಿಯರಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡುವುದಲ್ಲದೆ, ಗರ್ಭಧಾರಣೆಯ ಆರಂಭದಲ್ಲಿ ನೋಂದಣಿಯ ನಂತರ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಆರೋಗ್ಯ ಸೇವೆಗಳಾದ, ಕಬ್ಬಿಣಾಂಶದ ಮಾತ್ರೆ, ಕ್ಯಾಲ್ಸಿಯಂ ಮತ್ತು ಜಂತು ಹುಳುಗಳ ಮಾತ್ರೆಗಳನ್ನು ನೀಡುವುದು, ಆರೋಗ್ಯ ತಪಾಸಣೆ, ಚುಚ್ಚುಮದ್ದು ಮುಂತಾದ ಸೇವೆಗಳನ್ನು ಒದಗಿಸಲಾಗುತ್ತಿದೆ. ಅಲ್ಲದೆ ಪೌಷ್ಟಿಕತೆ, ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ, ಪ್ರಸವ ಪೂರ್ವ ಆರೈಕೆ, ಸ್ತನ್ಯಪಾನ ಮುಂತಾದವುಗಳ ಬಗ್ಗೆ ಅಂಗನವಾಡಿ ಕೇಂದ್ರದಲ್ಲಿ ಸಮಾಲೋಚನೆ ನಡೆಸಲಾಗುತ್ತಿದೆ.

## 3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಕೈಗೊಂಡಿರುವ ಕ್ರಮಗಳು:

1. ಗರ್ಭಿಣಿ ಮತ್ತು ಬಾಣಂತಿಯರಲ್ಲಿ ರಕ್ತ ಹೀನತೆಯನ್ನು ನಿವಾರಿಸಲು ಕಬ್ಬಿಣಾಂಶ ಮತ್ತು ಫೋಲಿಕ್ ಆಸಿಡ್ ಮಾತ್ರೆಗಳನ್ನು ಹಾಗೂ ಕ್ಯಾಲ್ಸಿಯಂ ಮಾತ್ರೆಗಳನ್ನು ಉಚಿತವಾಗಿ ಎಲ್ಲಾ ವರ್ಗದ ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರಿಗೆ ನೀಡಲಾಗುತ್ತಿದೆ.
2. ಈ ವರ್ಗದ ಮಹಿಳೆಯರಲ್ಲಿ ರಕ್ತಹೀನತೆಯನ್ನು ತಡೆಗಟ್ಟಲು ಜಂತು ನಿವಾರಣಾ ಗುಳಿಗೆಯಾದ ಆಲ್‌ಬೆಂಡಜೋಲ್ ಮಾತ್ರೆಯನ್ನು ಉಚಿತವಾಗಿ ನೀಡಲಾಗುತ್ತಿದೆ.
3. ತೀವ್ರತರ ರಕ್ತಹೀನತೆಯನ್ನು ನಿವಾರಿಸಲು ಐರನ್ ಸುಕ್ರೋಸ್ ಚುಚ್ಚುಮದ್ದನ್ನು ಉಚಿತವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ನೀಡಲಾಗುತ್ತಿದೆ.
4. ಗರ್ಭಿಣಿ ಮತ್ತು ಬಾಣಂತಿಯರಲ್ಲಿ ತೀವ್ರತರ ರಕ್ತಹೀನತೆಯನ್ನು ನಿವಾರಿಸಲು ಉಚಿತವಾಗಿ ರಕ್ತವನ್ನು ಪೂರೈಸಲಾಗುತ್ತಿದೆ.
5. ಪ್ರತಿ ಗ್ರಾಮ ಮತ್ತು ವಾರ್ಡ್‌ಗಳಲ್ಲಿ ಕಡ್ಡಾಯವಾಗಿ ಗ್ರಾಮ ಆರೋಗ್ಯ ಮತ್ತು ಪೌಷ್ಟಿಕಾಂಶ ದಿನವನ್ನು ನಡೆಸಲಾಗುತ್ತಿದ್ದು, ಎಲ್ಲಾ ಗರ್ಭಿಣಿ/ಬಾಣಂತಿ/ಹದಿಹರೆಯದ ಹೆಣ್ಣು ಮಕ್ಕಳ ಗುಂಪಿಗೆ ಅಪೌಷ್ಟಿಕತೆ ಬಗ್ಗೆ ಆಶಾ ಕಾರ್ಯಕರ್ತೆ, ಅಂಗನವಾಡಿ ಕಾರ್ಯಕರ್ತೆ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಮೂಲಕ ಅರಿವು ಮೂಡಿಸಲಾಗುತ್ತಿದೆ.
6. ಹೆಣ್ಣುಮಕ್ಕಳಲ್ಲಿ ಪದೇ ಪದೇ ಗರ್ಭಧಾರಣೆಯಿಂದ ಸಂಭವಿಸುವ ಅಪೌಷ್ಟಿಕತೆಯನ್ನು ತಡೆಗಟ್ಟಲು ತಾತ್ಕಾಲಿಕ ಕುಟುಂಬ ಕಲ್ಯಾಣ ಸಾಮಗ್ರಿಗಳಾದ "ನಿರೋಧ್", ಮತ್ತು "ಮಾಲಾ-ಎನ್" ಗುಳಿಗೆಯನ್ನು ಉಚಿತವಾಗಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ.
7. ಸರ್ಕಾರಿ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ, ಹೆರಿಗೆ ಆದ ನಂತರದ ಮಹಿಳೆಯರಿಗೆ ಪೌಷ್ಟಿಕಾಂಶವನ್ನು ಬಲಪಡಿಸಲು ಬಿ.ಪಿ.ಎಲ್/ಎಸ್.ಸಿ/ಎಸ್.ಟಿ ಕುಟುಂಬದವರಿಗೆ ರೂ. 600/700 ಗಳ ನಗದು ಪ್ರೋತ್ಸಾಹ ಧನವನ್ನು ಅವರ ಖಾತೆಗೆ ನೇರವಾಗಿ ಪಾವತಿಸಲಾಗುತ್ತಿದೆ.